**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

***ಎಸ್.ಸಿ.* 21/2019**

| | | |
|---|---|---|
| ಸಾಕ್ಷಿದಾರರ ಹೆಸರು | ಃ **ಚಂದ್ರಮೋಹನ** | *ಪ್ರಮಾಣ ಮಾಡಿದ ದಿನಾಂಕಃ* |
| ತಂದೆ ಹೆಸರು | ಃ **ಸುನಂದರಾಜ್** | **16.08.2022** |
| ವಯಸ್ಸು | ಃ **62 ವರ್ಷ** | |
| ವೃತ್ತಿ | ಃ **ರೈಲ್ವೆ ಉದ್ಯೋಗಿ** | **ಪಿಡಬ್ಲ್ಯೂ ಃ 03** |
| ವಾಸ ಸ್ಥಳ | ಃ **ಮೈಸೂರು** | **ಸಿಡಬ್ಲ್ಯೂ ಃ 02** |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

**ಚಾಸಾ-1 ನನ್ನ ಮಗ. ಚಾಸಾ-6 ನನ್ನ ಮಗಳು. ಮೃತ ಪವಿತ್ರಾಕುಮಾರಿ ನನ್ನ ಹೆಂಡತಿ. ನಾನು ರೈಲ್ವೆ ವರ್ಕಶಾಪ್‌ನಲ್ಲಿ ಕೆಲಸ ಮಾಡುತ್ತೇನೆ. 2015ರಲ್ಲಿ ನನ್ನ ಮಗಳು ಇಂಜನೀಯರ್ ಓದುತ್ತಿದ್ದಳು. ನನ್ನ ಮಗ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ. ನ್ಯಾಯಾಲಯದೆದುರು ಹಾಜರಿರುವ ಆರೋಪಿ ಪರಿಚಯ ಇದೆ. ಆರೋಪಿ ಮನೆ ನಮ್ಮ ಮನೆಯ ಎದುರು ವಾಸ ವಿದ್ದು, ಸರ್ಕಾರಿ ಶಾಲೆ ಶಿಕ್ಷಕಿಯಾಗಿದ್ದಾರೆ.**

**2. ನನ್ನ ಹೆಂಡತಿ ಸಾಯುವ 5-6 ತಿಂಗಳ ಹಿಂದೆ ಆರೋಪಿ ಕಡೆಯಿಂದ ವಾರದ ಬಡ್ಡಿ ಮೇಲೆ ರೂ.40,000/-ಗಳನ್ನು ವಾರಕ್ಕೆ ರೂ.4,000/- ಬಡ್ಡಿಯಂತೆ ಸಾಲವಾಗಿ ಪಡೆದಿದ್ದಳು. ನನ್ನ ಹೆಂಡತಿ ಸಾಯುವ ಮೂರು ದಿನಗಳ ಹಿಂದೆ ಆರೋಪಿ ನಮ್ಮ ಮನೆಯ ಬಳಿ ಬಂದು ಅಸಲು ಬಡ್ಡಿ ಸೇರಿ ಎಲ್ಲಾ ಸೇರಿ ರೂ.3,00,000/- ಆಗಿದೆ ಎಂದು, ಆ ಹಣವನ್ನು ವಾಪಸ್ ಕೊಡುವಂತೆ ಇಲ್ಲದಿದ್ದರೆ ಎಲ್ಲಾದರೂ ಹೋಗಿ ಸಾಯಿ ಎಂದು ಗಲಾಟೆ ಮಾಡಿದ್ದಳು. ನನ್ನ ಹೆಂಡತಿಯನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಳು.**

**3. ದಿನಾಂಕ 11.06.2015ರಂದು ಮಧ್ಯಾಹ್ನ 12 ಗಂಟೆಗೆ ನನ್ನ ಮಗಳನ್ನು ಕಾಲೇಜ್‌ನಿಂದ ಕರೆದುಕೊಂಡು 12:30 ಗಂಟೆಗೆ ಮನೆಗೆ ಬಂದಿರುತ್ತೇನೆ. ಆ ಸಮಯದಲ್ಲಿ ನನ್ನ ಹೆಂಡತಿ ಮನೆ ಯಲ್ಲಿ ಒಬ್ಬಳೆ ಇದ್ದಳು. ನಾವು ಬಂದು ನೋಡಿದಾಗ ನನ್ನ ಹೆಂಡತಿ ಮನೆಯ ಪ್ಯಾಸೇಜ್‌ನಲ್ಲಿ**

ಬಿದ್ದಿದ್ದಳು. ನಾವು ಪರಿಶೀಲಿಸಲಾಗಿ ಅವಳ ಬಳಿ ಇಲಿ ಔಷಧಿ ವಾಸನೆ ಬರುತ್ತಿತ್ತು. ಅವಳಿಗೆ ಪ್ರಜ್ಞೆ ಇರಲಿಲ್ಲ. ಅವಳ ಪಕ್ಕದಲ್ಲಿ ಇಲಿ ಔಷಧಿಯ ಪೊಟ್ಟಣ ಬಿದ್ದಿತ್ತು. ಅವಳು ವಿಷ ಕುಡಿದಿದ್ದಾಳೆ ಎಂದು ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದೆವು. ಅದೇ ದಿನ ಸಂಜೆ 5:45ರ ವೇಳೆಗೆ ನನ್ನ ಹೆಂಡತಿ ಮೃತಪಟ್ಟಿರುವುದಾಗಿ ತಿಳಿಯಿತು. ನನ್ನ ಹೆಂಡತಿ ಸಾಲ ಮಾಡಿದ್ದು 5-6 ದಿನಗಳ ಹಿಂದೆ ಆರೋಪಿ ಹಣ ವಾಪಸ್ ಕೊಡುವಂತೆ ಬಲವಂತ ಮಾಡಿ ಬೈದಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನನ್ನ ಹೆಂಡತಿ ಆರೋಗ್ಯವಾಗಿಯೇ ಇದ್ದಳು. ಆತ್ಮಹತ್ಯೆ ಮಾಡಿಕೊಳ್ಳಲು ಬೇರೆ ಯಾವುದೇ ಕಾರಣ ಇರಲಿಲ್ಲ.

4. ನನ್ನ ಮಗಳ ವಿದ್ಯಾಭ್ಯಾಸದ ಖರ್ಚಿಗಾಗಿ ಸಾಲ ಮಾಡಿದ್ದೆವು. ಅದೇ ದಿನ ಸಂಜೆ ಪೊಲೀಸರಿಗೆ ದೂರು ಕೊಟ್ಟಿದ್ದೆ. ದೂರನ್ನು ನಿಪಿ-3 ಎಂದು, ಸಾಕ್ಷಿ ರುಜುವನ್ನು ನಿಪಿ-3(ಎ) ಎಂದು ಗುರುತಿಸಿದೆ. ನಂತರ ಪೊಲೀಸರು ಮನೆಗೆ ಬಂದು ಮಹಜರ ಬರೆದಿದ್ದರು. ಸ್ಥಳವನ್ನು ನಾನೇ ತೋರಿಸಿದೆ. ಆ ಸಮಯದಲ್ಲಿ ಚಾಸಾ-8 ಮತ್ತು 9ರವರು ಪಂಚರಾಗಿ ಹಾಜರಿದ್ದರು. ಮಹಜರನ್ನು ನಿಪಿ-4 ಎಂದು, ಸಾಕ್ಷಿ ರುಜುವನ್ನು ನಿಪಿ-4(ಎ) ಎಂದು ಗುರುತಿಸಿದೆ. ಮನೆಯಲ್ಲಿ ಬಿದ್ದಿದ್ದ ಇಲಿ ಔಷಧಿಯ ಪೊಟ್ಟಣವನ್ನು ತಂದು ತೋರಿಸುವಂತೆ ವೈದ್ಯರು ಹೇಳಿದ್ದರು. ಅದರಂತೆ ಅದನ್ನು ತೆಗೆದುಕೊಂಡು ಹೋಗಿ ವೈದ್ಯರಿಗೆ ಕೊಟ್ಟಿದ್ದೆ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದ:-

5. ದೂರನ್ನು ನಾನೇ ಬೆರಳಚ್ಚು ಮಾಡಿಸಿ ಕೊಟ್ಟಿದ್ದೆ. ನಾನು ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ಮನೆಯ ವ್ಯವಹಾರಗಳನ್ನು ನಾನು ಮತ್ತು ನನ್ನ ಹೆಂಡತಿ ಇಬ್ಬರು ನೋಡಿಕೊಳ್ಳು ತ್ತಿದ್ದೆವು. ಆರೋಪಿ ನಮಗೆ ಬಹಳ ವರ್ಷಗಳಿಂದಲೂ ಪರಿಚಯ. ಅಧಿಕ ಬಡ್ಡಿ ಕೊಡುವುದು ಮತ್ತು ತೆಗೆದುಕೊಳ್ಳುವುದು ಎರಡೂ ತಪ್ಪು ಎಂದರೆ ಸರಿ. ನನ್ನ ಹೆಂಡತಿ ಮತ್ತು ಆರೋಪಿ ನಡುವಿನ ಹಣಕಾಸಿನ ವ್ಯವಹಾರಗಳು ನನಗೆ ಖುದ್ದಾಗಿ ಗೊತ್ತಿರಲಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಆ ದಿನ 12 ಗಂಟೆಗೆ ರಜೆ ಹಾಕಿ ಮಗಳನ್ನು ಕಾಲೇಜ್‌ಗೆ ಕರೆದುಕೊಂಡು ಹೋಗಿ 12:45ರ ವೇಳೆಗೆ ಮನೆಗೆ ಬಂದಿದ್ದೆವು ಎನ್ನುವುದಾಗಿ ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

ನನ್ನ ಹೆಂಡತಿ ಆರೋಪಿಗೆ ವಾರಕ್ಕೆ ರೂ.4,000/- ಬಡ್ಡಿ ಕೊಡುತ್ತಿದ್ದ ವಿಚಾರ ಮೊದಲು ತಿಳಿದಿರಲಿಲ್ಲ. ಕೊನೆಕೊನೆಗೆ ತಿಳಿದುಬಂದಿತ್ತು. ಮಂಡಿ ಪೊಲೀಸ ಠಾಣೆ ನನ್ನ ಮನೆಗೆ ಸುಮಾರು ಒಂದು ಕಿ.ಮೀ. ದೂರದಲ್ಲಿದೆ.

6. ಆರೋಪಿ ವಾರಕ್ಕೆ ರೂ.4,000/- ಬಡ್ಡಿ ವಸೂಲಿ ಮಾಡುತ್ತಿದ್ದ ಬಗ್ಗೆ ಮೊದಲು ದೂರ ನ್ನು ಕೊಟ್ಟಿರಲಿಲ್ಲ. ಆರೋಪಿ ಬಂದು ಗಲಾಟೆ ಮಾಡಿದ ದಿನಾಂಕ 07.06.2015 ಇರುತ್ತದೆ. ಅಲ್ಲಿಂದ ದಿನಾಂಕ 11.06.2015ರವರೆಗೆ ಈ ವಿಚಾರದ ಬಗ್ಗೆ ನಾವು ಯಾರಿಗೂ ದೂರು ಕೊಟ್ಟಿರ ಲಿಲ್ಲ. ದೂರು ಕೊಡಲು ತೊಂದರೆ ಇರಲಿಲ್ಲ. ನಾನು ಪೊಲೀಸರ ಮುಂದೆ ದೂರು ನೀಡುವಾಗ ನನ್ನ ಹೆಂಡತಿ ವಿಷ ಸೇವನೆ ಮಾಡಿ ಮೃತಪಟ್ಟಿರುತ್ತಾಳೆ, ಯಾರ ಮೇಲೂ ಅನುಮಾನ ಇಲ್ಲ ಎಂದು ದೂರು ನೀಡಿದ್ದು ಎನ್ನುವುದಾಗಿ ತಿಳಿಸಿಲ್ಲ. ಈ ಭಾಗವನ್ನು ನಿಡಿ-1 ಎಂದು ಗುರುತಿಸಿದೆ. ನಾನು ಪೊಲೀಸರ ಮುಂದೆ ನನ್ನ ಹೆಂಡತಿ ಕುಡಿದಿದ್ದ ......... ಜ್ಞಾಪಕ ಇರುವುದಿಲ್ಲ ಎನ್ನುವುದಾಗಿ ಹೇಳಿಕೆ ಕೊಟ್ಟಿಲ್ಲ. ಈಗ ಭಾಗವನ್ನು ನಿಡಿ-2 ಎಂದು ಗುರುತಿಸಿದೆ.

7. ಆ ಸಮಯದಲ್ಲಿ ನನಗೆ ಮಾಸಿಕ ರೂ.30,000/- ರಿಂದ ರೂ.35,000/- ಸಂಬಳ ಬರುತ್ತಿತ್ತು. ನಾವು ಮನೆ ಬಾಡಿಗೆಗಾಗಿ ರೂ.10,000/- ಕೊಡುತ್ತಿದ್ದೆವು. ನನ್ನ ಮಗಳ ಶಾಲಾ ಶುಲ್ಕ ಎಲ್ಲಾ ಸೇರಿ ರೂ.1,00,000/- ಪಾವತಿ ಮಾಡಿದ್ದೆವು. ನನ್ನ ಹೆಂಡತಿ ಆರೋಪಿ ಬಳಿ ಮೊದಲಿನಿಂದ ಆಗಾಗ್ಗೆ ಹಣ ಪಡೆಯುವುದು ಹಿಂತಿರುಗಿಸುವುದು ಮಾಡುತ್ತಿದ್ದಳು. ನನ್ನ ಹೆಂಡತಿ ಸತ್ತ ನಂತರ ಬೇರೆ 4-5 ಜನ ನನ್ನ ಬಳಿ ಬಂದು ನನ್ನ ಹೆಂಡತಿ ತಮ್ಮ ಕಡೆಯಿಂದ ಸಾಲ ಮಾಡಿರುವ 2, 3, 5 ಲಕ್ಷಗಳಂತೆ ಹಿಂತಿರುಗಿಸಲು ಒತ್ತಾಯ ಮಾಡಿದ್ದರು ಎಂದರೆ ಸರಿಯಲ್ಲ. ಬೇರೆ ಸಾಲಗಾರರ ಕಡೆಯಿಂದ ತಪ್ಪಿಸಿಕೊಳ್ಳಲು ಆರೋಪಿ ಮೇಲೆ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಬೇರೆಯವರ ಕಡೆ ಕೂಡ ರೂ.5,000/-, 10,000/- ಗಳಂತೆ ಸಾಲ ಮಾಡಿ ಹಿಂತಿ ರುಗಿಸುತ್ತಿದ್ದಳು. ಲಕ್ಷಗಟ್ಟಲೇ ಸಾಲ ಮಾಡಿರಲಿಲ್ಲ. ನನ್ನ ಹೆಂಡತಿ, ಆರೋಪಿ ಕಡೆ ಯಾವುದೇ ಸಾಲ ಮಾಡಿರಲಿಲ್ಲ ಎನ್ನುವುದು, ಬೇರೆ ಯಾರ ಕಡೆ ಸಾಲ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಆರೋಪಿ ಬಳಿ ನನ್ನ ಹೆಂಡತಿ ಸಾಲ ಮಾಡಿದ್ದ ಬಗ್ಗೆ ಯಾವುದೇ ದಾಖಲೆ

**ಗಳು ಇಲ್ಲ. ಯಾವುದೇ ಸಣ್ಣ ಚೀಟಿ, ರಶೀದಿಗಳೂ ಕೂಡ ಇಲ್ಲ. ಬಡ್ಡಿ ಹಣ ಕೊಟ್ಟ ಬಗ್ಗೆ ಕೂಡ ದಾಖಲೆ ಇಲ್ಲ. ಚೆಕ್, ಪ್ರೊನೋಟ್ ಮೂಲಕ ಹಣ ವ್ಯವಹಾರ ಮಾಡಿಲ್ಲ.**

**8. ನನ್ನ ಹೆಂಡತಿಯ ಸಾವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಮರು ವಿಚಾರಣೆ:- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**16.08.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.